8	ಮೆ ಸಿ.ಜಿ. ಸ್ಕಂಬರ್ಜರ್ ಎಲೆಕ್ಟ್ರಿಸಿಟಿ ಮ್ಯಾನೇಜ್‌ಮೆಂಟ್ ಹೊಸ ದೆಹಲಿ	31	–	31
9	ಮೆ॥ ಕ್ಯಾಪಿಟಲ್ ಮೀಟರ್ಸ್ (ಲಿ) ನೊಯಿಡ	1200	–	1200
10	ಮೆ॥ ಎವಾನ್ ಮೀಟರ್ಸ್ ಪ್ರೈ. ಲಿ. ಡರಬೆಸ್ಸಿ	1300	–	1322
12	ಮೆ॥ ಇ.ಸಿ.ಇ. ಇಂಡಸ್ಟ್ರೀಜ್ ಲಿ, ಹೈದರಾಬಾದ್	400	–	401
13	ಮೆ॥ ಟಿ.ಟಿ.ಎಲ್ (ಲಿ) ದೆಹಲಿ	4	989	1634
15	ಅಲ್ಸ್ಟಾಮ್	–	355	467
16	ರೆಮ್ಕೊ	–	464	464
17	ವೆಲ್‌ವಿನ್	–	507	507
18	ಸೈಮನ್ಸ್	–	–	317
19	ಆರ್.ಸಿ.	–	–	601
20	ಮೆ॥ ಲ್ಯಾಂಡೀಸ್ ಗ್ರಯ್ಸ್	–	–	964
21	ಮೆ॥ ಇಸ್ಕ್ರಾ	–	–	14
22	ಮೆ॥ ಟೆಸ್ಕಾಂ	–	–	101

4801(4682) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸ್ವಾತಂತ್ರ್ಯ ಬಂದಾಗಿನಿಂದ 1998 ರವರೆಗೂ ರಾಜ್ಯದಲ್ಲಿ ನಿರ್ಮಿಸಲಾದ ರಾಷ್ಟ್ರೀಯ ಹೆದ್ದಾರಿಗಳ ಸಂಖ್ಯೆ ಎಷ್ಟು ಹಾಗೂ ಇವುಗಳ ಉದ್ದ ಎಷ್ಟು;

ಆ) 1998–2004ರವರೆಗೆ ನಿರ್ಮಿಸಲಾದ ರಾಷ್ಟ್ರೀಯ ಹೆದ್ದಾರಿಯ ಉದ್ದವೆಷ್ಟು ಮತ್ತು ಪ್ರಗತಿಯಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳೆಷ್ಟು, ಉದ್ದವೆಷ್ಟು;

ಇ) 2004–05 ನೇ' ಸಾಲಿನಲ್ಲಿ ನಿರ್ಮಿಸಲಾದ ರಾಷ್ಟ್ರೀಯ ಹೆದ್ದಾರಿಯ ಉದ್ದ ಎಷ್ಟು; ವಿವರ ನೀಡುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಸ್ವಾತಂತ್ರ್ಯ ಬಂದಾಗಿನಿಂದ 1998 ರವರೆಗೂ ರಾಜ್ಯದಲ್ಲಿ ನಿರ್ಮಿಸಲಾದ ರಾಷ್ಟ್ರೀಯ ಹೆದ್ದಾರಿಗಳು 8 ಇವುಗಳ ಒಟ್ಟು ಉದ್ದ 2363 ಕಿ.ಮೀ.ಗಳು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) 1998–2004 ರವರೆಗೆ ನಿರ್ಮಿಸಲಾದ ರಾಷ್ಟ್ರೀಯ ಹೆದ್ದಾರಿಗಳು 6 ಸಂಖ್ಯೆ ಇದ್ದು ಅವುಗಳ ಒಟ್ಟು ಉದ್ದ 1610 ಕಿ.ಮೀ.ಇರುತ್ತದೆ. ವಿವರವನ್ನು ಅನುಬಂಧ–2ರಲ್ಲಿ ನೀಡಿದೆ. ರಾಜ್ಯದಲ್ಲಿ ಒಟ್ಟು 14 ರಾಷ್ಟ್ರೀಯ ಹೆದ್ದಾರಿಗಳಿದ್ದು ಅವುಗಳ ಒಟ್ಟು ಉದ್ದ 3973 ಕಿ.ಮೀ.ಗಳು. ಎಲ್ಲಾ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಗತ್ಯತೆಗೆ ತಕ್ಕಂತೆ ಪ್ರಗತಿ ಕಾರ್ಯಗಳನ್ನು ಪ್ರತಿ ಸಾಲಿನಲ್ಲಿಯೂ ಕೈಗೊಳ್ಳಲಾಗುತ್ತಿದೆ.

ಇ) 2004–05ನೇ ಸಾಲಿನಲ್ಲಿ ಹೊಸದಾಗಿ ರಾಷ್ಟ್ರೀಯ ಹೆದ್ದಾರಿ ನಿರ್ಮಿಸಿರುವುದಿಲ್ಲ. ಅಂದರೆ ಘೋಷಿಸಿರುವುದಿಲ್ಲ. ಹಾಲಿ ಘೋಷಿಸಿರುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಗತ್ಯತೆಗೆ ತಕ್ಕಂತೆ ಪ್ರಗತಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

4802(4683) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿದ್ಯುತ್ ಮಗ್ಗಗಳಿಗೆ ರಾಜ್ಯದಲ್ಲಿ ವಿಧಿಸುವ ವಿದ್ಯುತ್ ದರ ಎಷ್ಟು ಸಂಪೂರ್ಣ ವಿವರ ನೀಡುವುದು;

ಆ) ನೆರೆ ರಾಜ್ಯಗಳಲ್ಲಿ ವಿದ್ಯುತ್ ಮಗ್ಗಗಳಿಗೆ ರಿಯಾಯ್ತಿ ದರದಲ್ಲಿ ವಿದ್ಯುತ್ ಒದಗಿಸುತ್ತಿರುವುದು ನಿಜವೇ, ನಮ್ಮ ರಾಜ್ಯದಲ್ಲಿ ರಿಯಾಯ್ತಿ ದರದಲ್ಲಿ ವಿದ್ಯುತ್‌ನ್ನು ಒದಗಿಸಲಾಗುತ್ತಿದೆಯೇ;

ಇ) ಹಾಗಿದ್ದಲ್ಲಿ ನೆರೆ ರಾಜ್ಯಗಳ ಹಾಗೂ ನಮ್ಮ ರಾಜ್ಯಗಳ ವಿದ್ಯುತ್ ರಿಯಾಯ್ತಿಯ ದರದ ವಿವರ ನೀಡುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ರಾಜ್ಯದಲ್ಲಿರುವ ವಿದ್ಯುತ್ ಮಗ್ಗಗಳಿಗೆ ಎಲ್.ಟಿ.–5 ಜಕಾತಿಯಲ್ಲಿನ ದರಗಳನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ